# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1424 (1593) |
| ಮಾನ್ಯ ಸದಸ್ಯರ ಹೆಸರು | ಶ್ರೀಮತಿ ಹೇಮಲತಾ ನಾಯಕ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 18-03-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 2025-26ನೇ ಸಾಲಿನಲ್ಲಿ ಮುದ್ರಾಂಕ ಮತ್ತು ನೋಂದಣಿ ಇಲಾಖೆ ಮತ್ತು ಖನಿಜ ಮತ್ತು ಭೂವಿಜ್ಞಾನ ಇಲಾಖೆ ವತಿಯಿಂದ ಎಷ್ಟು ರೂಪಾಯಿ ಆದಾಯ ಸಂಗ್ರಹಣೆ ಗುರಿಯನ್ನು ನಿಗದಿಪಡಿಸಲಾಗಿದೆ; ಇದರ ಪೈಕಿ ಇಲ್ಲಿಯವರೆಗೆ ಎಷ್ಟು ರೂಪಾಯಿಗಳು ಆದಾಯ ಸಂಗ್ರಹವಾಗಿದೆ; (ವಿವರಗಳನ್ನು ಒದಗಿಸುವುದು) | ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ 2025-26ನೇ ಸಾಲಿನಲ್ಲಿ ರೂ.28,000 ಕೋಟಿಗಳ ರಾಜಸ್ವ ಸಂಗ್ರಹಣೆಯ ಗುರಿ ನಿಗಧಿಪಡಿಸಲಾಗಿದೆ ಹಾಗೂ ಏಪ್ರಿಲ್ -2025 ರಿಂದ ಫೆಬ್ರವರಿ – 2026 ರ ಅಂತ್ಯಕ್ಕೆ ರೂ.22,772.76 ಕೋಟಿಗಳ ರಾಜಸ್ವ ಸಂಗ್ರಹವಾಗಿರುತ್ತದೆ.<br><br>ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ 2025-26ನೇ ಸಾಲಿನಲ್ಲಿ ರೂ.9,000 ಕೋಟಿಗಳ ರಾಜಸ್ವ ಸಂಗ್ರಹಣೆಯ ಗುರಿ ನಿಗಧಿಪಡಿಸಲಾಗಿದೆ ಹಾಗೂ ಫೆಬ್ರವರಿ – 2026 ರ ಅಂತ್ಯಕ್ಕೆ ರೂ.7823.23 ಕೋಟಿಗಳ ರಾಜಸ್ವ ಸಂಗ್ರಹವಾಗಿರುತ್ತದೆ. |
| ಆ | ಜಿಲ್ಲಾವಾರು ಕಂದಾಯ ಸಂಗ್ರಹದ ಗುರಿ ಮತ್ತು ಸಾಧನೆ ಎಷ್ಟಿದೆ; ಸಂಪೂರ್ಣ ಮಾಹಿತಿಯನ್ನು ನೀಡುವುದು; | ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಜಿಲ್ಲಾವಾರು ಗುರಿ ಮತ್ತು ರಾಜಸ್ವದ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಿದೆ.<br><br>ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಜಿಲ್ಲಾವಾರು ಗುರಿ ಮತ್ತು ರಾಜಸ್ವದ ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಿದೆ. |

| | | |
|---|---|---|
| ಇ | ತೆರಿಗೆ ವಂಚನೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು) | 1. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2.0 ತಂತ್ರಾಂಶವನ್ನು ಭೂಮಿ, ಇ-ಸ್ವತ್ತು ಮತ್ತು ಇ-ಆಸ್ತಿ ತಂತ್ರಾಂಶಗಳೊಂದಿಗೆ ಸಂಯೋಜಿಸಿದ್ದು, ಸ್ವತ್ತುಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ನೋಂದಾಯಿಸುವ ಪೂರ್ವದಲ್ಲಿ ಸ್ವತ್ತಿನ ವಿವರಗಳನ್ನು ಮತ್ತು ಸ್ವತ್ತಿನ ಮಾಲೀಕರ ವಿವರಗಳನ್ನು ಸಂಯೋಜನೆ ಮೂಲಕ ಪಡೆದು ನೋಂದಾಯಿಸಲಾಗುತ್ತಿದ್ದು, ಪಕ್ಷಕಾರರು ಕಟ್ಟಡದ ಮಾಹಿತಿ, ಸ್ವತ್ತಿನ ಸ್ವರೂಪ ಮತ್ತು ಇನ್ನಿತರೆ ಸ್ವತ್ತಿನ ಮೌಲ್ಯವನ್ನು ನಿರ್ಧರಿಸುವ ಅಂಶಗಳನ್ನು ಮರೆಮಾಚಿ ನೋಂದಾಯಿಸಲು ಸಾಧ್ಯವಾಗದೇ ಇರುವುದರಿಂದ, ಇದರಿಂದ ಉಂಟಾಗುತ್ತಿದ್ದ ತೆರಿಗೆ ವಂಚನೆಯನ್ನು ನಿಯಂತ್ರಿಸಲು ಕ್ರಮಕೈಗೊಳ್ಳಲಾಗಿದೆ.<br>2. ರಾಜ್ಯದಲ್ಲಿ ಸರಿಯಾದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯವನ್ನು ನಿಗಧಿಪಡಿಸಲು GIS ತಂತ್ರಾಂಶವನ್ನು ಅಳವಡಿಸಲಾಗುತ್ತಿದೆ ಇದರಿಂದ ಸರಿಯಾದ ಮಾರ್ಗಸೂಚಿ ಮೌಲ್ಯವನ್ನು ನಿರ್ಧರಿಸಬಹುದಾಗಿದೆ.<br>3. ನೋಂದಣಿಯೇತರ ದಸ್ತಾವೇಜುಗಳಿಗೆ ಸರಿಯಾದ ಮುದ್ರಾಂಕ ಶುಲ್ಕ ಆಕರಿಸಲು Digital e-Stamp ತಂತ್ರಾಂಶದ ಮುಖಾಂತರ ಮುದ್ರಾಂಕ ಶುಲ್ಕವನ್ನು ಆಕರಿಸಲಾಗುತ್ತಿದೆ.<br><br>ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಅಕ್ರಮ ಗಣಿಗಾರಿಕೆ ನಿಯಂತ್ರಣಕ್ಕೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ:<br>1) ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಐಅ 21 ಎಂಎಂಎನ್(2) 2014 ದಿನಾಂಕ:21-01-2014 ರಂತೆ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 21 ಮತ್ತು 22 ರಡಿ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಳು 1994ರ ನಿಯಮ-43 ಮತ್ತು 46 ರಂತೆ ಅನಧಿಕೃತ ಗಣಿಕಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ವಿರುದ್ಧ ಕ್ರಮವಹಿಸಲು ಕಂದಾಯ, ಅರಣ್ಯ, ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದ್ದು, ಅನಧಿಕೃತ ಕಲ್ಲುಗಣಿಗಾರಿಕೆ/ ಸಾಗಾಣಿಕೆಯನ್ನು |

| | | |
|---|---|---|
| | | ಅನಧಿಕೃತ ಕಲ್ಲುಗಣಿಗಾರಿಕೆ/ ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ರಾಜ್ಯದಲ್ಲಿ ಆಯಾಕಟ್ಟಿನ ಪ್ರದೇಶಗಳಲ್ಲಿ ತನಿಖಾ ಠಾಣೆಗಳನ್ನು ತೆರೆದು ಕಾರ್ಯನಿರ್ವಹಿಸುತ್ತಿದ್ದು, ಅನಧಿಕೃತ ಕಲ್ಲುಗಣಿಗಾರಿಕೆ/ ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ.<br><br>ಅಕ್ರಮ ಗಣಿ ಚಟುವಟಿಕೆ ನಡೆಸುತ್ತಿದ್ದವರ ವಿರುದ್ಧ ಎಂ.ಎಂ. (ಡಿ & ಆರ್) ಕಾಯ್ದೆ -1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿರುತ್ತದೆ.<br><br>ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಖನಿಜಗಳ ಗಣಿಗಾರಿಕೆಗಾಗಿ ಗಣಿ ಗುತ್ತಿಗೆಗಳನ್ನು ಪಾರದರ್ಶಕವಾಗಿ ಹರಾಜು ಮೂಲಕ ಮಂಜೂರು ಮಾಡಲಾಗುತ್ತಿದೆ.<br><br>ಇಲಾಖೆಯಿಂದ ರಾಜ್ಯದಲ್ಲಿ ಮಂಜೂರು ಮಾಡಿರುವ ಕಲ್ಲುಗಣಿಗುತ್ತಿಗೆ ಪ್ರದೇಶಗಳನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಕೇಂದ್ರ (KSRSAC) ರವರಿಂದ ಕಲ್ಲುಗಣಿಗುತ್ತಿಗೆ ಪ್ರದೇಶಗಳ ಡ್ರೋಣ್/ ಡಿ.ಜಿ.ಪಿ.ಎಸ್ ಸರ್ವೆ ಕೈಗೊಳ್ಳಲಾಗುತ್ತಿದ್ದು, ಗುತ್ತಿಗೆ ಪ್ರದೇಶದ ಪ್ರಸ್ತುತ ಭೂಮಟ್ಟದ ಅಳತೆಗಳನ್ನು ಘನೀಕರಿಸಲಾಗಿದೆ.<br><br>Integrated Lease Management System (ILMS) version-II ಜಾರಿಗೊಳಿಸಲಾಗುತ್ತಿದ್ದು ಅನಧಿಕೃತ ಖನಿಜ ಸಾಗಾಣಿಕೆಯನ್ನು ತಡೆಗಟ್ಟಲು ಖನಿಜ ಸಾಗಾಣಿಕಾ ವಾಹನಗಳಿಗೆ GPS ಅಳವಡಿಸಿ ಕೇಂದ್ರೀಕೃತವಾಗಿ ನಿಗಾವಹಿಸಲು ತಂತ್ರಾಂಶ ರೂಪಿಸಲಾಗಿರುತ್ತದೆ.<br><br>ಮಂಜೂರಾದ ಗಣಿ/ಕಲ್ಲುಗಣಿ ಗುತ್ತಿಗೆ ಪ್ರದೇಶಗಳನ್ನು ಹೊರತುಪಡಿಸಿ ಗುತ್ತಿಗೆ ಪ್ರದೇಶದ ಹೊರಭಾಗದಲ್ಲಿ ಒತ್ತುವರಿ ಮಾಡಿ ಗಣಿಗಾರಿಕೆಯನ್ನು ನಡೆಸುವುದನ್ನು ತಡೆಗಟ್ಟಲು Geo-fencing ಅಳವಡಿಸಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. |

| | | |
|---|---|---|
| | | ಅನಧಿಕೃತ ಖನಿಜ ಸಾಗಾಣಿಕೆಯನ್ನು ಪತ್ತೆ ಹಚ್ಚಲು ಖನಿಜ ರವಾನೆ ಪರವಾನಿಗೆ ಕಡ್ಡಾಯಗೊಳಿಸಲಾಗಿದ್ದು, ಖನಿಜ ರವಾನೆ ಪರವಾನಿಗೆ ವಿಶೇಷ ರಕ್ಷಣಾತ್ಮಕ ಹಾಳೆಯಲ್ಲಿ ವಿತರಿಸಲಾಗುತ್ತಿದೆ.<br><br>ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟಲು ಖನಿಜ ರಕ್ಷಣಾ ಪಡೆ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. |

ಕಂಇ/99/ಎಂಎನ್‌ಎಸ್‌ಎ/2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಅನುಬಂಧ - 1

ನಮೂನೆ
ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ

## 2025-26 ನೇ ಸಾಲಿನಲ್ಲಿ ಏಪ್ರಿಲ್ ರಿಂದ ಫೆಬ್ರವರಿ ವರೆಗಿನ ಗುರಿಗೆ ರಾಜಸ್ವ ಸಂಗ್ರಹಣೆಯ ವಿವರ.

(ರೂ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಜಿಲ್ಲಾ ನೋಂದಣಿ ಕಛೇರಿ ಹೆಸರು | 2025-26 ಏಪ್ರಿಲ್ ರಿಂದ ಫೆಬ್ರವರಿ ವರೆಗಿನ ಗುರಿ | 2025-26 (ಏಪ್ರಿಲ್ ರಿಂದ ಫೆಬ್ರವರಿ ವರೆಗೆ ಸಂಗ್ರಹವಾದ ರಾಜಸ್ವ |
|---|---|---|---|
| 1 | 2 | 4 | 5 |
| 1 | ಬೆಂಗಳೂರು ನಗರ ಜಿಲ್ಲೆ | | |
| | ಬಸವನಗುಡಿ | 2386.74 | 2324.54 |
| | ಗಾಂಧಿನಗರ | 2635.61 | 2256.36 |
| | ಜಯನಗರ | 3291.13 | 2648.77 |
| | ರಾಜಾಜಿನಗರ | 1802.46 | 1412.74 |
| | ಶಿವಾಜಿನಗರ | 5463.27 | 4600.53 |
| | ಬೆಂಗಳೂರು ನಗರ 5 ಜಿಲ್ಲಾ | **15579.20** | **13242.95** |
| 2 | ಬೆಂಗಳೂರು (ಗ್ರಾ) ಜಿಲ್ಲೆ | 1650.07 | 1895.68 |
| 3 | ಬಾಗಲಕೋಟೆ | 174.93 | 164.45 |
| 4 | ಬೆಳಗಾವಿ | 497.73 | 450.98 |
| 5 | ಬಳ್ಳಾರಿ | 491.41 | 183.18 |
| 6 | ಬೀದರ್ | 143.37 | 119.24 |
| 7 | ವಿಜಾಪುರ | 190.25 | 190.02 |
| 8 | ಚಾಮರಾಜನಗರ | 82.05 | 86.16 |
| 9 | ಚಿಕ್ಕಬಳ್ಳಾಪುರ | 258.78 | 362.96 |
| 10 | ಚಿಕ್ಕಮಗಳೂರು | 205.58 | 200.97 |
| 11 | ಚಿತ್ರದುರ್ಗ | 189.35 | 179.56 |
| 12 | ದಾವಣಗೆರೆ | 247.96 | 206.66 |
| 13 | ಧಾರವಾಡ | 398.54 | 385.02 |
| 14 | ಗದಗ | 108.20 | 101.98 |
| 15 | ಕಲ್ಬುರ್ಗಿ | 311.08 | 312.88 |
| 16 | ಹಾಸನ | 297.55 | 286.05 |
| 17 | ಹಾವೇರಿ | 115.41 | 108.44 |
| 18 | ಕಾರವಾರ | 103.69 | 91.96 |
| 19 | ಕೊಡಗು | 126.24 | 117.39 |
| 20 | ಕೋಲಾರ | 356.16 | 451.89 |
| 21 | ಕೊಪ್ಪಳ | 146.07 | 135.02 |
| 22 | ಮಂಡ್ಯ | 210.09 | 244.54 |
| 23 | ಮಂಗಳೂರು ದ.ಕ | 644.70 | 585.39 |
| 24 | ಮೈಸೂರು | 1071.19 | 993.74 |
| 25 | ರಾಯಚೂರು | 201.98 | 180.05 |
| 26 | ರಾಮನಗರ | 365.18 | 414.95 |
| 27 | ಶಿವಮೊಗ್ಗ | 262.39 | 226.39 |
| 28 | ತುಮಕೂರು | 401.25 | 385.06 |
| 29 | ಉಡುಪಿ | 264.19 | 280.11 |
| 30 | ವಿಜಯನಗರ | 73.94 | 107.10 |
| 31 | ಯಾದಗಿರಿ | 78.45 | 81.97 |
| | ಒಟ್ಟು ಮೊತ್ತ | 25247.00 | 22772.76 |

Deputy Inspector General of Registration
(Intelligence), Bengaluru.

# ಅನುಬಂಧ-2

## 2025-26ನೇ ಸಾಲಿನಲ್ಲಿ ಜಿಲ್ಲಾವಾರು ನಿಗದಿ ಪಡಿಸಿರುವ ರಾಜಸ್ವ ಗುರಿ ಮತ್ತು ಸಂಗ್ರಹಣೆ ವಿವರ (ಫೆಬ್ರುವರಿ 2026 ರ ಅಂತ್ಯದವರೆಗೆ)

ರೂ. ಕೋಟಿಗಳಲ್ಲಿ

| ಕ್ರ.ಸಂ. | ಜಿಲ್ಲೆ | ವಾರ್ಷಿಕ ಗುರಿ | ಸಂಗ್ರಹಣೆ (ಫೆಬ್ರುವರಿ 2026 ರ ಅಂತ್ಯದವರೆಗೆ) |
|---|---|---|---|
| 1 | Bagalkote | 140.00 | 89.75 |
| 2 | Ballari | 5272.00 | 4567.53 |
| 3 | Bengaluru Rural | 105.00 | 70.73 |
| 4 | Bengaluru Urban | 253.00 | 201.38 |
| 5 | Belagavi | 210.00 | 87.47 |
| 6 | Bidar | 20.00 | 12.40 |
| 7 | Chamarajanagar | 70.00 | 31.88 |
| 8 | Chikkaballapur | 233.00 | 103.14 |
| 9 | Chikkamagaluru | 70.00 | 25.49 |
| 10 | Chitradurga | 741.45 | 896.31 |
| 11 | Dakshina Kannada | 125.00 | 62.75 |
| 12 | Davanagere | 80.20 | 17.37 |
| 13 | Dharwad | 50.00 | 42.20 |
| 14 | Gadag | 50.00 | 13.15 |
| 15 | Kalaburagi | 475.00 | 313.51 |
| 16 | Hassan | 110.50 | 37.36 |
| 17 | Haveri | 20.00 | 8.70 |
| 18 | Vijayanagara | 100.00 | 96.62 |
| 19 | Kodagu | 10.00 | 3.91 |
| 20 | Kolar | 110.00 | 40.62 |
| 21 | Koppal | 154.05 | 49.57 |
| 22 | Mandya | 20.00 | 26.68 |
| 23 | Mysuru | 15.30 | 23.36 |
| 24 | Raichuru | 130.00 | 127.90 |
| 25 | Ramanagara | 100.00 | 48.21 |
| 26 | Shivamogga | 10.05 | 12.07 |
| 27 | Tumakuru | 160.00 | 82.52 |
| 28 | Udupi | 50.00 | 35.10 |
| 29 | Uttara Kannada | 40.40 | 17.89 |
| 30 | Vijayapura | 50.00 | 40.32 |
| 31 | Yadgir | 25.05 | 16.02 |
| | Head Office | 0.00 | 383.85 |
| | TTR & Others | 0.00 | 237.47 |
| | **Total** | **9000.00** | **7823.23** |